ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1536
ಸದಸ್ಯರ ಹೆಸರು	:	ಶ್ರೀ ಎನ್.ಎಸ್. ಭೋಸರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	19.03.2020
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯಿಂದ ಮಸ್ಕಿ, ಮಾನ್ವಿ, ಸಿರವಾರ, ರಾಯಚೂರು ತಾಲ್ಲೂಕುಗಳಲ್ಲಿ ರೈತರುಗಳು ಬೆಳೆಯುವ ಬೇಸಿಗೆ ಕಾಲದ ಬೆಳೆಗಳಿಗೆ ನೀರು ಸರಬರಾಜು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ತುಂಗಭದ್ರಾ ಜಲಾಶಯದಲ್ಲಿನ ನೀರಿನ ಲಭ್ಯತೆ ಅನುಸಾರ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯಿಸಿದಂತೆ, ಬೇಸಿಗೆ ಕಾಲದ ಬೆಳೆಗಳಿಗೆ ಕಾಲುವೆ ಮೂಲಕ ನೀರು ಹರಿಸಲಾಗುತ್ತಿದೆ.
ಆ)	ತುಂಗಭಧ್ರಾ ಮುಖ್ಯ ಕಾಲುವೆಯಲ್ಲಿ 3400 ಕ್ಯೂಸೆಕ್ಸ್ ನೀರು ಬಿಟ್ಟಿರುವ ಸಂದರ್ಭದಲ್ಲಿ 69 ಮೈಲ್‌ನಲ್ಲಿ ನೀರಿನ ಪ್ರಮಾಣ ಎಷ್ಟು ಇರಬೇಕು; ಪ್ರಸ್ತುತ, ಎಷ್ಟು ಪ್ರಮಾಣದ ನೀರು ಸರಬರಾಜು ಮಾಡಲಾಗುತ್ತಿದೆ ಈ ಮುಖ್ಯ ಕಾಲುವೆಯಲ್ಲಿ ಗೇಜುಗಳು ಸರಿ ಇಲ್ಲದೇ ಇರುವುದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ತುಂಗಭಧ್ರಾ ಎಡದಂಡೆ ಮುಖ್ಯ ಕಾಲುವೆಯಲ್ಲಿ 3400 ಕ್ಯೂಸೆಕ್ಸ್ ನೀರು ಹರಿಬಿಟ್ಟಿರುವ ಸಂದರ್ಭಗಳಲ್ಲಿ ಮೈಲ್–69ರಲ್ಲಿ ನೀರಿನ ಪ್ರಮಾಣವು ಸುಮಾರು 1200 ಕ್ಯೂಸೆಕ್ಸ್ ಇರಬೇಕಾಗಿರುತ್ತದೆ. ಆದರೆ ವಡ್ಡರಹಟ್ಟಿ ಮತ್ತು ಸಿಂಧನೂರು ವಿಭಾಗಗಳಲ್ಲಿ ಕಾಲುವೆ ಎಡ ಭಾಗದಲ್ಲಿ ಹಾಗೂ ವಿತರಣಾ ಕಾಲುವೆಗಳಲ್ಲಿ ಬೆಳೆ ಉಲ್ಲಂಘನೆ ಮಾಡಿ ಭತ್ತದ ಬೆಳೆ ಬೆಳೆಯುತ್ತಿರುವುದರಿಂದ ಮೈಲ್–69ರಲ್ಲಿ ಪ್ರಸ್ತುತ 750ರಿಂದ 850 ಕ್ಯೂಸೆಕ್ಸ್ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಮುಂದುವರೆದು ಎಡದಂಡೆ ಮುಖ್ಯ ಕಾಲುವೆಯ ಆದುನೀಕರಣ ಕಾಮಗಾರಿ ಕೈಗೊಂಡ ನಂತರ ಕಾಲುವೆಯಲ್ಲಿ ನೀರು ಹರಿವಿನ ವೇಗ ಹೆಚ್ಚಾಗಿ, ಮೊದಲಿನ ಕೆಲವು ಗೇಜಿಂಗ್ ಸ್ಥಳಗಳಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ. ಈಗಾಗಲೇ ಕೆ.ಇ.ಆರ್.ಎಸ್. ಮೈಸೂರು ಇವರಿಗೆ ಗೇಜ್ ಮಾಪನ ಮಾಡಲು ಕೋರಲಾಗಿದ್ದು, ಸದರಿಯವರು ಎರಡು ಬಾರಿ ಕಾಲುವೆಯ ವಿವಿದ ಆಳದ ಮಟ್ಟದಲ್ಲಿ ಅಳತೆ ಮಾಪನ ಮಾಡಿದ್ದು, ಇನ್ನು ಎರಡರಿಂದ ಮೂರು ಬಾರಿ ಕಾಲುವೆಯ ವಿವಿಧ ಆಳದ ಮಟ್ಟಗಳಲ್ಲಿ ಅಳತೆ ಮಾಪನ ಮಾಡಿ, ಕಾಲುವೆ ಗೇಜ್ ಕರ್ವ್‌ಗಳನ್ನು ತಯಾರಿಸಬೇಕಾಗಿರುತ್ತದೆ. ಗೇಜ್ ಕರ್ವ್‌ಗಳ ವರದಿಯನ್ನು ಪಡೆದುಕೊಂಡು, ಕಾಲುವೆಯಲ್ಲಿ ಗೇಜ್‌ಗಳನ್ನು ನಿಗದಿಪಡಿಸಲು ಕ್ರಮ ಕೈಗೊಳ್ಳಲಾಗುವುದು.
ಇ)	TLBC ಮುಖ್ಯ ಕಾಲುವೆಯಲ್ಲಿ ಇರುವ 05 ವಿಭಾಗಗಳಲ್ಲಿ ವಿಭಾಗವಾರು ಎಷ್ಟು ಕ್ಯುಸೆಕ್ಸ್ ನೀರು ಕೊಡಬೇಕು; ಪ್ರಸ್ತುತ ಎಷ್ಟು ಕ್ಯುಸೆಕ್ಸ್ ನೀರು ಸರಬರಾಜು ಮಾಡಲಾಗುತ್ತಿದೆ?	ಪ್ರಸ್ತುತ ಎಡದಂಡೆ ಮುಖ್ಯ ಕಾಲುವೆಯಲ್ಲಿ 3500 ಕ್ಯೂಸೆಕ್ಸ್ ನೀರು ಹರಿಬಿಡುತ್ತಿದ್ದು ಅದಕ್ಕೆ ಅನುಗುಣವಾಗಿ ವಿಭಾಗವಾರು ಕೊಡಬೇಕಾದ ನೀರಿನ ಪ್ರಮಾಣ ಮತ್ತು ಸರಬರಾಜು ಆಗುತ್ತಿರುವ ನೀರಿನ ಪ್ರಮಾಣದ ವಿವರಗಳು.

ವಿಭಾಗ	ಗೇಜಿಂಗ್ ಸ್ಥಳಗಳು	ಗೇಜಿಂಗ್ ಸ್ಥಳಗಳಲ್ಲಿ ಕೊಡಬೇಕಾದ ಸರಾಸರಿ ನೀರಿನ ಪ್ರಮಾಣ (ಒಟ್ಟು 3500 ಕ್ಯೂಸೆಕ್ಸ್‌ಗೆ ಎದುರಾಗಿ)	ಪ್ರಸ್ತುತ ಗೇಜಿಂಗ್ ಸ್ಥಳಗಳಲ್ಲಿ ಸರಬರಾಜು ಆಗುತ್ತಿರುವ ಸರಾಸರಿ ನೀರಿನ ಪ್ರಮಾಣ
ವಡ್ಡರಹಟ್ಟಿ	ಮೈಲ್ 47	2150	1900
ಸಿಂಧನೂರು	ಮೈಲ್ 69	1265	850
ಸಿರವಾರ	ಮೈಲ್ 104	440	85

ಸಂಖ್ಯೆ:ಜಸಂಇ 50 ಎಂಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು